**ಕವಿತೆ**





**ಎಚ್.ಎಸ್. ವೆಂಕಟೇಶಮೂರ್ತಿ**

ಕಲೆ: ವಿಶ್ವನಾಥ್ ಎ.ಎಸ್.

# ಒಂದು ಪ್ರಾರ್ಥನೆ

ಎಕ್ಕುಂಡಿ ಮಾಸ್ತರರೆ ನಿಮ್ಮ ಮಿಥಿಲೆಯ ಯಾತ್ರೆ
ಯಾವತ್ತು ವಿವರಗಳ ನನಗೂ ಕೊಡಿ
ತಾಯಿ ಜನಿಸಿದ ತವರ ನಿಮ್ಮೊಡನೆ ನೋಡಲು
ನನಗೂ ಸಹ ಅನುಮತಿಯ ನೀಡಿ

ಮಿಥಿಲೆಯೂರಲ್ಲಿ ಮಣ್ಣಲ್ಲಿ ಮಲ್ಲಿಗೆಯರಳಿ
ಗಾಳಿಗೂ ನರುಗಂಪ ಕೊಡುವುದಂತೆ
ಅಲ್ಲಿ ಹಬ್ಬಿರುವ ಪರ್ವತಮಾಲೆ ಬಾನಿಗೇ
ಹಾರವಾಗಲು ತವಕ ಪಡುವುದಂತೆ

ಸಾಲು ಮರಗಳ ದಾರಿ ರಾಮಾಯಣದ ಪಂಕ್ತಿ
ಯಾಗಿ ನೆಲದಲ್ಲಿಯೇ ನಲಿವುದಂತೆ
ಬಾನು ಪರ್ವತಪಂಕ್ತಿ ಮೇಲೆ ಮೆಲ್ಲಗೆ ಇಳಿದು
ಮಳೆ ಮಾತನಾಡಿ ನೆಲಕೊಲಿವುದಂತೆ